ಅಲಂಕಾರಕ್ಕೆ ಒಪ್ಪದೆ ತಾನಿದ್ದಂತೆಯೇ ರಾಮನ ಬಳಿ ಹೊರಟಳು. ಜೊತೆಗೆ ವಿಭೀಷಣನ ಪತ್ನಿ ಹಾಗೂ ಒಬ್ಬಿಬ್ಬರು ಸೀತೆಯ ಕಾವಲಿಗಿದ್ದ ರಕ್ಕಸಿಯರೂ ಇದ್ದರು. ಅವರಲ್ಲೊಬ್ಬಳು ಸೀತೆಗೆ ಅನುಕಂಪ ತೋರುವವಳಾಗಿದ್ದರೆ, ಇನ್ನಿಬ್ಬರು ಅವಳನ್ನು ದ್ವೇಷಿಸುವವರಾಗಿದ್ದರು. ರಾಮನ ಸೈನ್ಯದವರು ಸ್ತ್ರೀಹತ್ಯೆಯಾಗಲೀ ಸ್ತ್ರೀಯರನ್ನು ಹಿಂಸಿಸುವವರಾಗಲೀ ಅಲ್ಲವೆಂದು ಕೇಳ್ಪಟ್ಟವರಾಗಿ ಅವರೂ ಜೊತೆಯಲ್ಲಿದ್ದರು. ಅವರೆಲ್ಲಾ ರಾಮನು ಕುಳಿತಿದ್ದ ಬಂಡೆಯೊಂದರ ಬಳಿ ಬಂದರು. ರಾಮಸೀತೆಯರು ಪರಸ್ಪರ ಒಬ್ಬರನ್ನೊಬ್ಬರು ದೃಷ್ಟಿಸಿದರು. ರಾಮನು ಏನಾದರೂ ಹೇಳಲು ಬಾಯಿ ತೆರೆಯುವ ಮುಂಚೆಯೇ ಸೀತೆ ಅವನಿಗೆ ನಮಸ್ಕರಿಸಿ, 'ರಾಮಾ, ಎಷ್ಟು ದಿನಗಳ ಮೇಲೆ ನಿನ್ನ ದರ್ಶನವಾಯಿತು. ನಾನು ಈ ದಿನಕ್ಕಾಗಿ ಎಷ್ಟು ತವಕಪಡುತ್ತಿದ್ದೆ. ನೀನು ನನಗಾಗಿ ಎಷ್ಟು ಕಷ್ಟಪಟ್ಟು ಸೈನ್ಯ ಸೇರಿಸಿ, ಸಮುದ್ರೋಲ್ಲಂಘನ ಮಾಡಿ ರಾವಣನನ್ನು ಸಂಹರಿಸಿದೆ. ಅದಕ್ಕಾಗಿ ನಾನು ಅತ್ಯಂತ ಕೃತಜ್ಞಳು' ಸ್ವಲ್ಪ ಬಿಕ್ಕಳಿಸಿ ಬರುತ್ತಿದ್ದ ಕಣ್ಣೀರನ್ನು ತಡೆದು, 'ರಾಮಾ, ಈ ನಮ್ಮ ವಿರಹದ ದಿನಗಳಲ್ಲಿ ನಾನು ಕಾಯಾ, ವಾಚಾ, ಮನಸಾ ನಿನ್ನನ್ನೇ ಸ್ಮರಿಸುತ್ತಾ, ನನ್ನ ಶುದ್ಧತೆಯನ್ನು ಕಾಪಾಡಿ ಕೊಂಡಿದ್ದೇನೆ. ಆದರೂ ರಾಮಾ, ಆ ಪಾಪಿ ಅಪಹರಿಸಿ ತಂದಾಗ ನನ್ನ ಶರೀರವನ್ನು ಮುಟ್ಟಿದ್ದಾನೆ. ಎಳೆದು ಪುಷ್ಪಕ ವಿಮಾನದಲ್ಲಿ ಕೂರಿಸುವಾಗ, ಅಶೋಕವನ ತಲುಪಿದ ಮೇಲೆ ವಿಮಾನದಿಂದ ಎಳೆದು ಆಚೆಗೆ ತಂದಾಗ ಈ ರೀತಿ ನನ್ನನ್ನು ಅವನ ಕೈಯಿಂದ ಮುಟ್ಟಿದ್ದಾನೆ. ಆ ರೀತಿ ನಾನು ಕಲುಷಿತಳಾಗಿದ್ದೇನೆ. ನಿನ್ನ ಜೊತೆ ಇರಲು ನಾನು ಅರ್ಹಳಲ್ಲ, ದಯವಿಟ್ಟು ಒಂದು ಚಿತೆಯನ್ನು ಸಿದ್ಧಪಡಿಸಲು ಲಕ್ಷ್ಮಣನಿಗೆ ಹೇಳು. ಅವನ ವಿಚಾರದಲ್ಲೂ ನಾನು ಅನುಚಿತವಾಗಿ ಮಾತಾಡಿ ಅವನನ್ನು ನೋಯಿಸಿದ್ದೇನಾದ್ದರಿಂದ ಅವನೇ ಚಿತೆ ಸಿದ್ಧಪಡಿಸಲಿ. ನಾನದರಲ್ಲಿ ಹಾರಿ ನನ್ನ ಪಾಪ ಕಳೆದುಕೊಳ್ಳುತ್ತೇನೆ. ಕೊನೆಯದಾಗಿ ನಿನ್ನ ದರ್ಶನ ಮಾಡದೆ ಸಾಯಲು ನನ್ನ ಮನ ಒಪ್ಪಲಿಲ್ಲವಾದ್ದರಿಂದ ನಾನು ಈ ಕ್ಷಣದವರೆಗೆ ಪ್ರಾಣ ಸಮೇತ ಇದ್ದೇನೆ' ಎಂದು, 'ಲಕ್ಷ್ಮಣಾ! ಚಿತೆಯನ್ನು ಸಿದ್ಧಪಡಿಸು' ಎಂದಳು.

ಲಕ್ಷ್ಮಣನಿಗೆ ಸೀತಾರಾಮರಿಬ್ಬರ ಅಣತಿಯನ್ನು ಪಾಲಿಸುವುದಷ್ಟೇ ಗೊತ್ತು. ಅದನ್ನು ವಿವೇಚಿಸುವ, ವಿಶ್ಲೇಷಿಸುವ, ವಿರೋಧಿಸುವ ಮನೋಭಾವವಿರಲಿಲ್ಲ. ಹಾಗಾಗಿ ಅವನು ಸಿದ್ಧಪಡಿಸಿಯೇ ಬಿಟ್ಟ ಚಿತೆಯನ್ನು. ಸೀತೆ ಸರಸರನೆ ಚಿತೆಯ ಸಮೀಪಕ್ಕೆ ಹೋಗಿ ಉರಿಯುತ್ತಿರುವ ಅಗ್ನಿಗೆ ಕೈಮುಗಿದು ಮೂರು ಸಲ ಪ್ರದಕ್ಷಿಣೆ ಬಂದು ಒಂದು ಕಾಲು ಚಿತೆಯ ಒಳಗಿಟ್ಟು ಪ್ರವೇಶ ಮಾಡುತ್ತಿರುವಾಗಲೇ ಹಿಂದಿನಿಂದ ಯಾರೋ ಬಲವಾಗಿ ಎಳೆದಂತಾಗಿ ಹಿಂದಕ್ಕೆ ಬೀಳುವಂತಾದಳು. ಬೀಳುತ್ತಿರುವ ಅವಳನ್ನು ಆಧರಿಸಿ ಹಿಡಿದುಕೊಂಡು, ಹೆಚ್ಚು ಕಡಿಮೆ ಎಳೆಯುತ್ತಲೇ ಅವಳನ್ನು ಕರೆತಂದು ತಾನು ಕುಳಿತಿದ್ದ ಬಂಡೆಯ ಎದುರಿಗೆ ಕೂರಿಸಿದ ಶ್ರೀರಾಮ! ಸೀತೆಯ ಒಂದು ಪಾದ ಸ್ವಲ್ಪಮಟ್ಟಿಗೆ ಸುಟ್ಟು ಹೊಪ್ಪಳೆ ಬಂದಿತ್ತು. ಕಪಿವೀರನಿಂದ ಅದಕ್ಕೆ ಮುಲಾಮು ತಯಾರಿಸುವಂತೆ ಹೇಳಿದ ರಾಮ, 'ನನ್ನ ಸೀತೆ! ನೀನು ಈ ರೀತಿ ಯೋಚಿಸಬಾರದು. ನಿನ್ನನ್ನು ಕರೆದೊಯ್ಯಲು ನಾನು ಪಟ್ಟ ಕಷ್ಟ ನಿನಗೆ ತಿಳಿಯದೇ? ನೀನು ಸುಟ್ಟು ಭಸ್ಮವಾದರೆ ಈ ಜಗದಲ್ಲಿ ನನಗೇನಿದೆ? ಇಷ್ಟಕ್ಕೂ ನಿನ್ನ ಇಚ್ಛೆಗೆ ವಿರೋಧವಾಗಿ ನಿನ್ನನ್ನು ಸ್ಪರ್ಶಿಸಿದ ರಾವಣ ದೋಷಿಯೇ ಹೊರತು ನೀನಲ್ಲ. ಅವನಿಗದಕ್ಕೆ ಶಿಕ್ಷೆಯೂ ಆಗಿದೆ. ನಿನ್ನ ಗಂಡನಿಗೆ ಸರಿ ತಪ್ಪುಗಳ ಪ್ರಜ್ಞೆ ಇದೆ ಎಂದು ನೀನು ನಂಬುವುದಾದರೆ ಈ ಹುಚ್ಚು ಆಲೋಚನೆಗಳನ್ನೆಲ್ಲಾ ಬಿಟ್ಟು, ಹೋಗಿ ಶುಭ್ರಸ್ನಾತಳಾಗಿ ಬಾ. ನಾವೆಲ್ಲಾ ಸಾಕೇತಕ್ಕೆ ಮರಳೋಣ. ಅಲ್ಲಿ ಭರತ ನಮಗಾಗಿ ಹಂಬಲಿಸುತ್ತಿರುತ್ತಾನೆ'.

'ಯಾರಲ್ಲಿ? ಸೀತೆಯನ್ನು ಕರೆದೊಯ್ದು ಸ್ನಾನ ಮಾಡಿಸಿ ಸಾಲಂಕೃತಳನ್ನಾಗಿಸಿ ಕರೆತನ್ನಿ' ಎಂದು ಅಪ್ಪಣೆ ಮಾಡಿದ. ವಿಭೀಷಣನ ಪತ್ನಿ ಸೀತೆಯ ಕೈ ಹಿಡಿದು ಹೊರಟಾಗ ರಕ್ಕಸಿಯರಿಬ್ಬರು 'ಎಂಥಾ ಪಿಶಾಚಿ ಹೆಣ್ಣು ಈ ಸೀತೆ! ಈ ಹಲ್ಲಿ ಮರಿಗಾಗಿ ನಮ್ಮ ಸುಂದರ ರಾವಣ ಸತ್ತು ಹೋದನಲ್ಲ! ಅವನಿಚ್ಛೆಯನ್ನು ಈಡೇರಿಸಿದ್ದರೆ ಇವಳಿಗೇನಾಗ್ತಿತ್ತು' ಇತ್ಯಾದಿ ಲೊಚಗುಟ್ಟುತ್ತಾ ಹೊರಟರು. ಕೇಳಿ ಕೆರಳಿದ ಕಪಿವೀರರನ್ನು ರಾಮನೇ ಸಮಾಧಾನಪಡಿಸಿ, 'ಅವರವರ ಸಂಸ್ಕಾರಕ್ಕೆ ತಕ್ಕಂತೆ ಅವರು ನಡೆದುಕೊಳ್ತಾರೆ ಬಿಟ್ಟು ಬಿಡಿ ಅವರನ್ನು' ಎಂದ.

ಮುಂದೆ ಎಲ್ಲರೂ ಆಯೋಧ್ಯೆಗೆ ಹಿಂದಿರುಗಿದರು. ತಾಯಿಯರಿಗೆ ಸಂತೋಷವಾಯಿತು. ಭರತನ ಜವಾಬ್ದಾರಿ ಕಳೆಯಿತು. ಸೀತಾರಾಮರ ಪಟ್ಟಾಭಿಷೇಕವಾಯಿತು. ಎಲ್ಲರೂ ಸಂತಸಪಟ್ಟರು. ಆದರೆ ಅಯೋಧ್ಯೆಯ ಆಡಳಿತ ತುಂಬಾ ಅಸ್ತವ್ಯಸ್ತಗೊಂಡಿತ್ತು. ಭರತನು ಶ್ರೀರಾಮನ ಚಿಂತೆಯಲ್ಲೇ, ತನ್ನ ತಾಯಿಯ ಕುಕೃತ್ಯವನ್ನು ನೆನೆಯುತ್ತಾ, ತನ್ನಿಂದಾಗಿಯೇ ಶ್ರೀರಾಮನಿಗೆ ಇಂತಹ ಕಷ್ಟ ಬಂತಲ್ಲಾ ಎಂದು ಕೊರಗುತ್ತಾ ಆಡಳಿತ ವಿಚಾರದಲ್ಲಿ ಅಸಡ್ಡೆಯಿಂದಿದ್ದ. ತತ್ಪರಿಣಾಮವಾಗಿ ಎಲ್ಲಾ ಕಡೆಯೂ ಅರಾಜಕತೆ, ಸರಿಯಾಗಿ ತೆರಿಗೆ ವಸೂಲಿಯಾಗದೆ ಖಾಲಿ ಬಿದ್ದಿದ್ದ ಅರಮನೆಯ ಖಜಾನೆ, ಎಲ್ಲಾ ಖಾತೆಯ ಅಧಿಕಾರಿಗಳು ಲಂಚ ರುಷುವತ್ತುಗಳ ಭರಾಟೆ. ಹೀಗಾಗಿ ದಿಗ್ಭ್ರಮೆ ಹಿಡಿಸುವಂತೆ ರಾಜ್ಯ ಹಾಳು ಬಿದ್ದಿತ್ತು.

ಸಿಂಹಾಸನಾರೋಹಣವಾದ ಮರುಕ್ಷಣದಿಂದಲೇ ರಾಮ ಸೂಕ್ತವಾದ ಕ್ರಮಗಳನ್ನು ಕೈಗೊಂಡು, ತಪ್ಪಿತಸ್ಥರನ್ನು ಶಿಕ್ಷಿಸಿ, ಅನ್ಯಾಯಕ್ಕೊಳಪಟ್ಟವರಿಗೆ ನ್ಯಾಯ ದೊರಕಿಸಿ, ಹಾಳಾಗಿದ್ದ ಕೆರೆ ಕಟ್ಟೆಗಳನ್ನು ದುರಸ್ತಿ ಮಾಡಿಸಿ ಮುಂದಿನ ಒಂದೆರಡು ವರ್ಷಗಳೊಳಗೆ ರಾಜ್ಯವನ್ನು ಒಂದು ಹದಕ್ಕೆ ತಂದ. ಆ ಮುಂದಿನ ವರ್ಷಗಳಲ್ಲಿ ನಿಜಕ್ಕೂ ರಾಜ್ಯ ರಾಮರಾಜ್ಯವಾಯಿತು. ಎಲ್ಲೆಲ್ಲೂ ಸುಭಿಕ್ಷ. ಆನಂದ, ಹಾಲು ಹೈನುಗಳ ಸಮೃದ್ಧಿ ಎಲ್ಲಾ ಆನಂದಮಯವಾಯಿತೆಂದೇ ಹೇಳಬಹುದು. ಸ್ವಲ್ಪ ನಿಲ್ಲಿಸಿದರು ಶಾಸ್ತ್ರಿಗಳು. ಮಾತಾಡಿ ಆಯಾಸವಾಗಿತ್ತೇನೋ ನಾನು ಬೇಗ ಎದ್ದು ಹೋಗಿ ನಿಂಬೆ ಪಾನಕ ಮಾಡಿ ತಂದುಕೊಟ್ಟೆ. ಕುಡಿದು ಸುಧಾರಿಸಿಕೊಂಡು ಪುನಃ ಶುರು ಮಾಡಿದರು. ನಾವು ಶ್ರೋತೃಗಳು ಇನ್ನೂ ಆಸಕ್ತಿಯಿಂದ ಕೇಳತೊಡಗಿದೆವು.

ಶ್ರೀರಾಮನು ಎಲ್ಲಾ ಕಡೆಯ ಸುದ್ದಿ ತಿಳಿಯಲು ಗೂಢಚಾರ ಪಡೆಯನ್ನು ನೇಮಿಸಿದ್ದರು. ತಮ್ಮ ವಿಚಾರವೇ ಆಗಲೀ, ರಾಜ್ಯದ ವಿಚಾರವೇ ಆಗಲಿ, ರಾಕ್ಷಸರ, ಶತ್ರುಗಳ ಎಲ್ಲಾ ಚಲನವಲನಗಳು ಆಯಾ ಕ್ಷಣದಲ್ಲೇ ತಿಳಿಯುವ ಬಹು ಸೊಗಸಾದ ವ್ಯವಸ್ಥೆ ಮಾಡಿಕೊಂಡಿದ್ದರು. ಹೀಗಿರುವಾಗ ಒಂದು ದಿನ ಸಂಜೆ ಗೂಢಚಾರರ ಸುದ್ದಿ ಕೇಳುವ ಸಮಯದಲ್ಲಿ ಒಬ್ಬ ಗೂಢಚಾರ ಹೆದಹೆದರುತ್ತಾ, 'ಮಹಾಸ್ವಾಮಿ, ಒಬ್ಬ ಅಗಸ ಹೆಂಡತಿಯನ್ನು ಬಯ್ಯುವಾಗ ತಮ್ಮ ಹೆಸರನ್ನುಪಯೋಗಿಸಿಕೊಂಡ' ಎಂದ. 'ಏನೇ ಇದ್ದರೂ ಧೈರ್ಯವಾಗಿ ಹೇಳು, ಮುಚ್ಚುಮರೆ ಮಾಡಿದರೆ ಕಠಿಣ ಶಿಕ್ಷೆ ತಪ್ಪದು' ಎಂದರು ರಾಮ. ಅವನು ತೊದಲುತ್ತಾ 'ಅಗಸನ ಹೆಂಡತಿ ತವರಿಗೆ ಹೊರಟು ಹೋಗಿದ್ದಳು ಇವನಿಗೆ ಹೇಳದೆ. ಅವಳ ತಂದೆತಾಯಿಯರು ಅವಳಿಗೆ ಬುದ್ಧಿ ಹೇಳಿ ವಾಪಸ್ ಕರೆತಂದಾಗ ಈ ಅಗಸ 'ನನಗೆ ಹೇಳದೆ ಕೇಳದೆ ಓಡಿ ಹೋಗಿದ್ದಾಳೆ. ಎಲ್ಲಿ ಯಾವನನ್ನು ನೆಚ್ಚಿ ಹೋದಳೋ ಯಾರಿಗೆ ಗೊತ್ತು? ಪುನಃ ಅವಳನ್ನು ಮನೆ ಸೇರಿಸಲು ನಾನೇನು ಶ್ರೀರಾಮನಲ್ಲ. ಹೋದವಳು ಪರಿಶುದ್ಧಳೋ ಅಲ್ಲವೋ ಎಂದು ಅವನಂತೂ ಗಣಿಸಲಿಲ್ಲ. ಆದರೆ ನಾನು ಅವನಂತಲ್ಲ' ಎಂದು. ಸಭೆಯಲ್ಲಿ ಕೆಲವು ಪ್ರಮುಖರು ಇದ್ದರು. ರಾಮರಾಜರು, 'ನೀನು ಹೋಗಿ ಆ ಅಗಸನ ಸ್ವಭಾವವೇನು? ಅವನ ಹೆಂಡತಿ ಎಂಥವಳು, ಬಜಾರಿಯೇ, ವಾರಾಂಗನೆಯೇ, ಸಾಧ್ವಿಯೇ ತಿಳಿದು ಬನ್ನಿ, ನಾಳೆ ಬೆಳಗಿನ ವೇಳೆಗೆ ಸುದ್ದಿ ಬಂದಿರಬೇಕು. ಎಷ್ಟು ಜನರನ್ನಾದರೂ ಜೊತೆಗೆ ಸೇರಿಸಿಕೋ' ಎಂದು ಕಳಿಸಿದನು.

ನಂತರ ಸಭೆಯ ಹಿರಿಯರಿಗೆ ಹೀಗೆಂದು ಹೇಳಿದನು. 'ಸಭಾಸದರೇ, ಇದು ಬಹು ಮುಖ್ಯ ವಾದ ಅಂಶ. ಇಂದು ಅಗಸನ ಬಾಯಲ್ಲಿ ಬಂದಿದ್ದು ನಾಳೆ ರಾಜ್ಯವೇ ಮಾತಾಡಬಹುದು. ಅನ್ಯನ ವಶದಲ್ಲಿದ್ದ ಸ್ತ್ರೀಯನ್ನು ರಾಮ ಸ್ವೀಕರಿಸಿ ಸಿಂಹಾಸನದಲ್ಲಿ ಕೂರಿಸಿಕೊಂಡ ಎಂದರೆ ಅದು ಸಿಂಹಾಸನಕ್ಕಾಗುವ ಅವಮಾನವಾಗಿ ಭಾವಿಸುತ್ತಾರೆ. ಇದ್ದಕ್ಕಿರುವ ಮಾರ್ಗಗಳು ಎರಡು' ಎನ್ನುತ್ತಲೇ ಸಭಾ ಪ್ರಮುಖರು ಎದ್ದು 'ಮಹಾರಾಜಾ, ಯಾರೋ ತಲೆಹೋಕನ ಮಾತಿಗೆ ತಾವು ಇಷ್ಟೊಂದು ಪ್ರಾಮುಖ್ಯಕೊಡುವ ಕಾರಣವಿಲ್ಲ. ತಾವು ಇದನ್ನು ನಿರ್ಲಕ್ಷಿಸಿದರೆ ಸಾಕು' ಎಂದನು. ಉಳಿದವರೂ ಅನುಮೋದಿಸಿದರು. ಅದಕ್ಕೆ ರಾಮರು, 'ಅದು ಹಾಗಲ್ಲ, ಪ್ರತಿ ಸಣ್ಣ, ದೊಡ್ಡ ವಿಷಯಗಳನ್ನೂ ನಾವು ಅಲಕ್ಷಿಸಬಾರದು. ನಾನು ನನ್ನ ಪತ್ನಿಯನ್ನು ಪಟ್ಟದ ರಾಣಿಯಾಗಿ ಸ್ವೀಕರಿಸುವುದರಿಂದ ಇವೆಲ್ಲಾ ಮಾತುಗಳು. ನಾನು ಆಗಲೇ ಹೇಳಿದಂತೆ ಇದಕ್ಕಿರುವುದು ಎರಡೇ ಮಾರ್ಗ. ಒಂದು ನಾನು ಸೀತೆಯನ್ನು ಪರಿತ್ಯಾಗ ಮಾಡಬೇಕು ಅಥವಾ ನಾನು ಸಿಂಹಾಸನವನ್ನು ಪರಿತ್ಯಾಗ ಮಾಡಬೇಕು'. ಸಭಾಸದರು 'ಎಲ್ಲಾದರೂ ಉಂಟೇ? ಎರಡೂ ಬೇಡ' ಎಂದರು. ವೃದ್ಧರಾದ ಮಂತ್ರಿಗಳು. 'ತಾವು ಇಷ್ಟೊಂದು ತಲ್ಲಣಗೊಳ್ಳಲು ಕಾರಣವಿಲ್ಲ. ಎಷ್ಟೋ ಕಷ್ಟಗಳನ್ನು ಅನುಭವಿಸಿ, ವನವಾಸ ಮಾಡಿ, ಈಗ ತಾನೇ ತಮ್ಮ ಬದುಕಿನಲ್ಲಿ ಆನಂದ ಕಾಣ್ತಿದ್ದೀರಿ. ರಾಜ್ಯ ಸುಭಿಕ್ಷವಾಗಿದೆ.

